
# ಸಾಧನೆ ಫಲಿಸಲು ನೀರೆರೆದು ಪೋಷಿಸಿದ ಪಿತ

ನನ್ನ ಬರಡು ಮನದ ನೆಲದಲ್ಲಿ ಬರವಣಿಗೆ ಒರತೆ ತೋರಿಸಿಕೊಟ್ಟಂತಹ ನನ್ನ ತಂದೆಯವರು ಸ್ವರ್ಗಸ್ಥರಾಗಿ ಇಪ್ಪತ್ತಕ್ಕೂ ಹೆಚ್ಚು ವರ್ಷಗಳು ಸಂದಿವೆ. ಆದರೆ ನನ್ನ ಬಾಳಿನ ಎಪ್ಪತ್ತರ ವಸಂತದಲ್ಲಿರುವ ಮಾಗಿದ ಮನದಲ್ಲಿ ಇಂದಿಗೂ ಹಚ್ಚ ಹಸುರಾಗಿ ನಿಂತಿದೆ ಅವರು ನೀಡಿದ ಪ್ರೋತ್ಸಾಹ ಮತ್ತು ಮಾರ್ಗದರ್ಶನ.



**■ ಅರವಿಂದ ಜಿ.ಜೋಷಿ, ಮೈಸೂರು**

ಅಪ್ಪನ ನಿರಂತರ ಪ್ರೋತ್ಸಾಹ, ನನ್ನಲ್ಲಿ ತುಂಬಿದ ಅಪಾರ ಆತ್ಮವಿಶ್ವಾಸ, ಸಾಧನೆಯ ಫಲ.. ಎಲ್ಲವೂ ಮಿಳಿತವಾದುದರ ಫಲ ನನ್ನನ್ನು ಬರಹಗಾರನನ್ನಾಗಿ ರೂಪಿಸಿದೆ. ಇದಕ್ಕೆ ಕಾರಣ ನನ್ನ ಅಪ್ಪ ಎಂಬುದನ್ನು ಹೆಮ್ಮೆಯಿಂದ ಹೇಳಬಲ್ಲೆ. ಅಪ್ಪನ ಈ ಪ್ರೀತಿ, ವ್ಯಾಮೋಹ ಹಾಗೂ ಸಾಧನೆಯ ಶಿಸ್ತಿನೊಂದಿಗೆ ರಾಜಿ ಮಾಡಿಕೊಳ್ಳದ ಗುಣವೇ ನನಗೆ ಶ್ರೀರಕ್ಷೆಯಾಗಿದ್ದು ಅಪ್ಪ ನನ್ನನಗಲಿ 20 ವರ್ಷಗಳಾದರೂ ಆ ನೆನಪು ಸದಾ ಹಚ್ಚ ಹಸಿರಾಗಿದೆ.

ರಾಜ್ಯ ಪೊಲೀಸ್ ಇಲಾಖೆಯಲ್ಲಿ ಅಖಂಡವಾಗಿ 35 ವರ್ಷಗಳ ಸೇವೆ ಸಲ್ಲಿಸಿ 1963 ರಲ್ಲಿ ಸೇವೆಯಿಂದ ನಿವೃತ್ತಿ ಹೊಂದಿದ ನಂತರವೂ ಆ ಗತ್ತು, ಶಿಸ್ತು ಒಂದಿನಿತೂ ಮಾಸಿರಲಿಲ್ಲ. ಮನಸ್ಸು ಮಾತ್ರ ಕುಟುಂಬದ ಮಕ್ಕಳ ಶ್ರೇಯೋಭಿವೃದ್ಧಿಗೆ ಸದಾ ತುಡಿಯುತ್ತಿತ್ತು. ಅಂತಹ ಒಂದು ವಿಶಿಷ್ಟ ಪರಿಸರದಲ್ಲಿ ಬೆಳೆದು ಬಂದಿರುವುದರ ಪರಿಣಾಮವೇ ಇಂದು ನನ್ನ ಜೀವನದಲ್ಲಿ ಸಮಯಪಾಲನೆ, ಶಿಸ್ತು ಹಾಸು ಹೊಕ್ಕಾಗಿವೆ ಎಂದು ಘಂಟಾ ಘೋಷವಾಗಿ ಹೇಳಬಲ್ಲೆ. ಮಕ್ಕಳ ಓದು ಬರಹದ ವಿಷಯಗಳಲ್ಲಂತೂ ಅವರದು ಬಿಗಿಪಟ್ಟು. ಹೊಂದಾಣಿಕೆ ಮಾತಂತೂ ಇಲ್ಲವೇ ಇಲ್ಲ.

ಕಾಲೇಜು ಶಿಕ್ಷಣ ವ್ಯಾಸಂಗ ಮಾಡುತ್ತಿದ್ದ ದಿನಗಳಲ್ಲಿ ಒಂದು ಬಾರಿ ಕನ್ನಡ ವಿಷಯದಲ್ಲೇ ಅತಿ ಕಡಿಮೆ ಅಂಕ ಪಡೆದು ಅನುತ್ತೀರ್ಣನಾಗಿದ್ದೆ. ಇದು ತಂದೆಯವರ ಗಮನಕ್ಕೆ ಬಂದಾಗ ಕೆಂಡಾಮಂಡಲವಾಗಿ ಸಾಕಷ್ಟು ಛೀಮಾರಿ ಹಾಕಿ ಬೆವರಿಳಿಸಿದ್ದರು. ನನ್ನಿಂದಾದ ತಪ್ಪನ್ನು ಅರ್ಥೈಸಿಕೊಂಡು ಎಲ್ಲವನ್ನೂ ನುಂಗಿ ಮಾನಸಿಕವಾಗಿ ಜರ್ಝರಿತನಾದರೂ ಮನಸ್ಸಿನಲ್ಲಿ ಶತಾಯಗತಾಯ ಇವರಿಂದಲೇ ಮೆಚ್ಚುಗೆ ಪಡೆದುಕೊಳ್ಳಲೇಬೇಕೆಂಬ ಬಲವಾದ ಛಲ ತೊಟ್ಟಿದ್ದೆ. ಅಂದು ಕೊಂಡಂತೆ ಆ ಘಳಿಗೆಯಿಂದಲೇ ಓದು–ಬರಹದಲ್ಲಿ ಹಿಂದಿಗಿಂತ ಹೆಚ್ಚಿನ ಮಗ್ನತೆ ರೂಢಿಸಿಕೊಳ್ಳುತ್ತ ಕೇವಲ ಕನ್ನಡ ಮಾತ್ರವಲ್ಲ ಉಳಿದ ವಿಷಯಗಳಲ್ಲೂ ಮುಂಚಿಗಿಂತಲೂ ಹೆಚ್ಚು ಹೆಚ್ಚು ಅಂಕ ಪಡೆಯಲಾರಂಭಿಸಿದೆ.

ದಿನಗಳು ಉರುಳಿದಂತೆ ನನ್ನ ಛಲದ ಮತ್ತು ಪ್ರಯತ್ನದ ಸಾಫಲ್ಯತೆ ಮಟ್ಟವನ್ನು ನನಗೆ ನಾನೇ ಪರೀಕ್ಷಿಸಿಕೊಳ್ಳಬೇಕೆಂಬ ಇರಾದೆ ಮೂಡಿತು. ಸರಿ, ನನ್ನ ಕಲ್ಪನೆಗೆ ಹೊಳೆದಂತೆ ಸಣ್ಣ ಪುಟ್ಟ ಕತೆ, ಕವನ, ಬರಹಗಳನ್ನು ಸಿದ್ಧಪಡಿಸಿ ತಂದೆಯವರ ಗಮನಕ್ಕೆ ತಂದಾಗ, ಅವರು ಅವುಗಳನ್ನು ಓದಿ, ಮೆಚ್ಚಿ ಅಗತ್ಯ ಇರುವೆಡೆ ತಿದ್ದಿದರು. ಆದರೆ ತಮ್ಮ ಮನದಲ್ಲಿ ಆದ ಸಂತಸವನ್ನು ವ್ಯಕ್ತಪಡಿಸಲಿಲ್ಲ. ಬದಲಿಗೆ 'ಅಲ್ವೋ ನಾನು ಮೆಚ್ಚಿದರೇನು? ನಾಲ್ಕು ಜನ ಮೆಚ್ಚಬೇಕು' ಪರೋಕ್ಷವಾಗಿ ಹರಿದು ಬಂದಿತು. ಹುರಿದುಂಬಿಕೆ ಮಾತು. ಅವರ ಮಾತಿನಂತೆ ಪ್ರಯತ್ನಕ್ಕಿಳಿದೆ.

ಆರಂಭದಲ್ಲಿ ಪತ್ರಿಕೆಗಳಿಗೆ ಕಳುಹಿಸಿದ ಬಹುತೇಕ ಬರಹಗಳು ಅಸ್ವೀಕೃತವಾಗುತ್ತಿವೆ ಎಂಬ ವಿಚಾರ ಅವರಿಗೆ ತಿಳಿದಾಗ ಊರುಗೋಲು ಊರುತ್ತ ನನ್ನ ಬಳಿ ಬಂದು ಸಾವಧಾನದಿಂದ 'ಹತಾಶನಾಗಬೇಡ ಮಾಡುತ್ತಿರುವ ಪ್ರಯತ್ನ ನಿಲ್ಲಿಸಬೇಡ ಯಶಸ್ಸು ಒಂದಿಲ್ಲ ಒಂದು ದಿನ ಖಂಡಿತ ಲಭಿಸುತ್ತದೆ' ಮತ್ತೆ ಪ್ರೋತ್ಸಾಹ ತುಂಬಿದರು. ನನ್ನ ಯತ್ನ ಮುಂದುವರೆಸಿದೆ. ಅವರು ನುಡಿದಂತೆ ಆ ದಿನಗಳೂ ಬಂದವು. ಸ್ಥಳೀಯ ಮತ್ತು ರಾಜ್ಯಮಟ್ಟದ ಕೆಲವು ವಾರ/ ಮಾಸಿಕ ಪತ್ರಿಕೆಗಳಲ್ಲಿ ನನ್ನ ಚಿಕ್ಕ ಚೊಕ್ಕ ಬರಹಗಳು ಪ್ರಕಟಗೊಂಡಿರುವುದನ್ನು ಗಮನಿಸಿ, ನನಗಿಂತಲೂ ಒಂದು ಪಟ್ಟು ಹೆಚ್ಚು ಪುಳಕಿತರಾಗಿ ಅವರು ತಮ್ಮ ಮಿತ್ರವೃಂದದಲ್ಲಿ ಅವುಗಳನ್ನು ತೋರಿಸುತ್ತ 'ನೋಡಿ ಇದು ಮಗ ಬರೆದದ್ದು' ಎಂದು ಹೆಮ್ಮೆಯಿಂದ ಹೇಳುತ್ತಿರುವುದನ್ನು ಕೇಳಿಸಿಕೊಂಡ ನಾನು ಅಂದು ಮನದಲ್ಲಿ ತೊಟ್ಟ ಛಲ, ಫಲ ನೀಡಲಾರಂಭಿಸಿತು ಎಂದು ಎನಿಸದೇ ಇರಲಿಲ್ಲ.

ಈ ರೀತಿ ನನ್ನ ಬರಡು ಮನದ ನೆಲದಲ್ಲಿ ಬರವಣಿಗೆ ಒರತೆ ತೋರಿಸಿ ಕೊಟ್ಟಂತಹ ನನ್ನ ತಂದೆಯವರು ಸ್ವರ್ಗಸ್ಥರಾಗಿ ಇಪ್ಪತ್ತಕ್ಕೂ ಹೆಚ್ಚು ವರ್ಷಗಳು ಸಂದಿವೆ. ಆದರೆ ನನ್ನ ಬಾಳಿನ ಎಪ್ಪತ್ತರ ವಸಂತದಲ್ಲಿರುವ ಮಾಗಿದ ಮನದಲ್ಲಿ ಇಂದಿಗೂ ಹಚ್ಚ ಹಸುರಾಗಿ ನಿಂತಿದೆ ಅವರು ನೀಡಿದ ಪ್ರೋತ್ಸಾಹ ಮತ್ತು ಮಾರ್ಗದರ್ಶನ. ಅದರಿಂದಾಗಿ ಇಂದು ನಾನು ಜನ ಒಪ್ಪುವ ರೀತಿ ನಾಲ್ಕು ಅಕ್ಷರ ಬರೆಯುವ ಹಂತಕ್ಕೆ ತಲುಪಿದ್ದೇನೆ ಎಂದರೆ ಅತಿಶಯೋಕ್ತಿಯಾಗದು. ಎಲ್ಲ ಶ್ರೇಯಸ್ಸು ಅವರಿಗೇ ಸಲ್ಲಬೇಕಾದದ್ದು. ■